ಚಾವಡಿಯ ಮೂಲೆಯಲ್ಲಿ ಮಲಗಿದ್ದ ಮಗನ ಹತ್ತಿರ ಹೋಗುವುದನ್ನು ಮತ್ತು ಅವನ ಜ್ವರದ ಮೈ ಮುಟ್ಟುವುದನ್ನು ಮಲಗಿದಲ್ಲಿಂದಲೇ ನೋಡಿದ ಆಕೆ ತೃಪ್ತಿಯಿಂದ ನಿದ್ದೆ ಮಾಡಿದಳು.

ಬೆಳಿಗ್ಗೆ ಎದ್ದವಳಿಗೆ ಏನೋ ಸಂಭ್ರಮ. ಹಾಲಿಗೆ ನೀರು ಬೆರೆಸುವ ಮುನ್ನ ಗಂಡನಿಗೊಂದು ಗಟ್ಟಿ ಹಾಲಿನ ಕಾಫಿ ಮಾಡಿಕೊಟ್ಟು ಎಂದಿಲ್ಲದ ಆಸ್ಥೆಯಿಂದ ತಿಂಡಿ ಮಾಡಿದಳು. ಗಂಡ ತಿಂಡಿ ತಿಂದು ತೋಟ ಸುತ್ತಲಿಕ್ಕೆ ಹೋಗುವುದನ್ನು ನೋಡಿ ಸಂಭ್ರಮಪಟ್ಟಳು. ಆತ ಅಪರೂಪಕ್ಕೆ ಮಕ್ಕಳನ್ನು ವಿಚಾರಿಸಿಕೊಳ್ಳುವುದು ಆಕೆಗೆ ಮುದ ನೀಡಿತು. ಮಧ್ಯಾಹ್ನ ಮನೆಯಲ್ಲೇ ಊಟ ಮಾಡಿ ಸಣ್ಣ ನಿದ್ದೆ ತೆಗೆಯುತ್ತಿದ್ದ ಗಂಡನನ್ನು ಆಪ್ಯಾಯತೆಯಿಂದ ನೋಡಿದಳು. ನಿದ್ದೆ ಮಾಡಿ ಏಳುವುದರೊಳಗೆ ಸಂಜೆಯ ಕಾಫಿಗೆ ಕುರುಕಲು ತಿಂಡಿಯನ್ನೇನಾದರೂ ಮಾಡುವ ಎಂದು ಅಡಿಗೆ ಮನೆಯನ್ನು ಹೊಕ್ಕವಳಿಗೆ ಏನೋ ಸಮಾಧಾನ. 'ಗಂಡನಿಗೂ ತಿಳಿವಳಿಕೆ ಬಂದಿದೆ. ನಿನ್ನೆ ನಾನು ಹೇಳಿದ ಮಾತು ಅರ್ಥವಾಗಿದೆ ಅವರಿಗೆ. ಇಷ್ಟು ದಿನದವರೆಗೆ ಅವರೊಂದಿಗೆ ಈ ಬಗ್ಗೆ ಮಾತನಾಡದೆ ತಾನೇ ತಪ್ಪು ಮಾಡಿದೆನೇನೋ...' ಎಂದುಕೊಳ್ಳುತ್ತ 'ಇನ್ನು ಮುಂದೆ ಮನೆಯಲ್ಲಿಯೇ ನಿಂತಾರು. ಹೊಳೆ ಬದಿಗೆ ದಂಡೆ ಕಟ್ಟಬೇಕು. ತೆಂಗಿನ ಮರದ ಬುಡವನ್ನೆಲ್ಲ ಸವರಿ ಅಗೆದು ಹಾಕಬೇಕು. ಅಂಗಡಿಯವ ಎರಡು ತಿಂಗಳ ಮಟ್ಟಿಗಾದರೂ ಸಾಲ ಕೊಡಲು ಒಪ್ಪಿದರೆ ಒಂದಿಷ್ಟು ಗೊಬ್ಬರವನ್ನಾದರೂ ತೆಂಗಿನ ಬುಡಕ್ಕೆ ಹಾಕಬೇಕು. ಮುಂದಿನ ದಿನಗಳಲ್ಲಾದರೂ ಒಳೆಯ ಫಲ ಕೊಟ್ಟಾವು. ಮಕ್ಕಳಿಗೊಂದು ದಾರಿಯಾದೀತು. ಪಾಪ! ಈ ಮಕ್ಕಳಾದರೂ ಎಷ್ಟು ದಿನ ಅಂತ ನನ್ನನ್ನೇ ನಂಬಿಕೊಂಡಿರುವುದು. ಅಪ್ಪನೊಡನೆಯೂ ಸ್ವಲ್ಪ ಬಳಕೆಯಾಗಲಿ' ಎಂದೆಲ್ಲ ಆಲೋಚಿಸುತ್ತ ತಿಂಡಿಯ ತಟ್ಟೆ ಮತ್ತು ಕಾಫಿಯ ಲೋಟದೊಂದಿಗೆ ಗಂಡನನ್ನು ಎಬ್ಬಿಸೋಣವೆಂದು ಹೊರಬಂದರೆ ಮಲಗಿದ ಜಾಗದಲ್ಲಿ ಅವರು ಇರಲಿಲ್ಲ. 'ಏನು ಇಷ್ಟು ಬೇಗ ಎದ್ದರೇ' ಎಂದುಕೊಂಡರೆ ಆಗಲೇ ಎದ್ದ ಆಸಾಮಿ ಅಂಗಿ ತೊಟ್ಟು ಶಾಲೊಂದನ್ನು ಹೆಗಲಿಗೇರಿಸಿಕೊಂಡು ಚಪ್ಪಲಿ ಮೆಟ್ಟುತ್ತಿದ್ದುದು ಕಾಣಿಸಿತು. ವಾಗ್ದೇವಿಗೆ ಗೊತ್ತು. ಗಂಡ ಅಂಗಿ ತೊಟ್ಟು ಚಪ್ಪಲಿ ಮೆಟ್ಟಿದರೆ ಏನು ಅರ್ಥ ಎಂದು. ಪ್ರಥಮ ಬಾರಿಗೆ ಕಂಡ ಅವಳ ಕನಸೆಲ್ಲ ನುಚ್ಚು ನೂರಾಗಿತ್ತು. ಕೈಯಲ್ಲಿ ಹಿಡಿದಿದ್ದ ತಿಂಡಿ ತಟ್ಟೆ ಮತ್ತು ಕಾಫಿಯನ್ನು ಹಾಗೇ ವಾಪಸು ತೆಗೆದುಕೊಂಡು ಹೋಗಿ ಹಸಿದು ಬರುವ ಮಕ್ಕಳಿಗಾಗುತ್ತದೆಯೆಂದು ಒಲೆಯ ದಂಡೆಯ ಮೇಲೆ ಮುಚ್ಚಿಟ್ಟು ಹೊರಬಂದವಳು ಗಂಡ ಹೋದ ದಿಕ್ಕಿನತ್ತಲೂ ನೋಡದೆ ತೋಟಕ್ಕಿಳಿದಿದ್ದಳು ಹೊಳೆಯ ದಂಡೆಗೆ ತಾನೇ ಏನಾದರೂ ಮಾಡಲಿಕ್ಕಾಗುತ್ತದೋ ನೋಡುವ ಎಂದು.

## ಪಿ.ಪಿ. ಉಪಾಧ್ಯ

ಭಾರತೀಯ ಜೀವ ವಿಮಾ ನಿಗಮದಲ್ಲಿ ಸೇವೆ ಸಲ್ಲಿಸಿರುವ ಪಿ.ಪಿ. ಉಪಾಧ್ಯ ಹಿರಿಯ ವಿಭಾಗಾಧಿಕಾರಿಯಾಗಿ ನಿವೃತ್ತರಾಗಿದ್ದಾರೆ. ಪ್ರಸ್ತುತ ಬೆಂಗಳೂರಿನಲ್ಲಿ ನೆಲೆಸಿದ್ದಾರೆ.

70ರ ದಶಕದ ಪೂರ್ವಾರ್ಧದಲ್ಲಿ ಸಣ್ಣ ಕತೆಗಳ ಕ್ಷೇತ್ರ ಪ್ರವೇಶ. 'ಮಯೂರ' 'ಸುಧಾ' ಸೇರಿದಂತೆ ಅನೇಕ ಮಾಸಪತ್ರಿಕೆ, ವಾರ ಪತ್ರಿಕೆ ಮತ್ತು ದಿನಪತ್ರಿಕೆಯ ಪುರವಣಿಗಳಲ್ಲಿ ಸುಮಾರು 100ಕ್ಕೂ ಹೆಚ್ಚು ಕತೆಗಳು ಪ್ರಕಟವಾಗಿವೆ. 'ಯಶೋದೆ' ಕಾದಂಬರಿ ಧಾರಾವಾಹಿಯಾಗಿ ಪ್ರಕಟಗೊಂಡಿದೆ. 'ಕಳೆದುಕೊಂಡಿದ್ದು ಮತ್ತು ಇತರ ಕತೆಗಳು' ಕಥಾಸಂಕಲನ ಹಾಗೂ ವ್ಯಕ್ತಿವಿಕಸನದ ಕುರಿತ ಮೂರು ಪುಸ್ತಕಗಳು ಪ್ರಕಟವಾಗಿವೆ.